ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	616
ಸದಸ್ಯರ ಹೆಸರು	:	ಶ್ರೀ ಗೋವಿಂದ ರಾಜು
ಉತ್ತರಿಸುವ ದಿನಾಂಕ	:	17-12-2021
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಭಿಕ್ಷಾಟನೆಯ ಹೆಸರಿನಲ್ಲಿ ಹಲವು ಅಕ್ರಮ ಚಟುವಟಿಕೆಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಭಿಕ್ಷಾಟನೆಗೆ ಹೆಚ್ಚಾಗಿ ಚಿಕ್ಕ ಮಕ್ಕಳನ್ನು ಬಳಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಇ)	ಬಂದಿದ್ದರೆ, ಇದುವರೆಗೂ ಎಷ್ಟು ಅಕ್ರಮ ಚಟುವಟಿಕೆಗಳ ಪ್ರಕರಣ ನಡೆದಿವೆ; ತೆಗೆದುಕೊಂಡಿರುವ ಕ್ರಮಗಳೇನು; (ವಿವರಗಳನ್ನು ಒದಗಿಸುವುದು)	ರಾಜ್ಯದಲ್ಲಿ ಭಿಕ್ಷಾಟಣೆ ಹೆಸರಿನಲ್ಲಿ ಚಿಕ್ಕ ಮಕ್ಕಳನ್ನು ಅಕ್ರಮ ಚಟುವಟಿಕೆಗಳಿಗೆ ಬಳಸಿಕೊಳ್ಳುತ್ತಿರುವ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ ಇಂತಹ ಪ್ರಕರಣಗಳಲ್ಲಿ ಸೂಕ್ತ ಕಾನೂನು ಕ್ರಮಗಳನ್ನು ಒಳಾಡಳಿತ ಇಲಾಖೆಯಿಂದ ಕೈಗೊಳ್ಳಲಾಗುತ್ತಿದೆ. ವಿವರಗಳು ಈ ಕೆಳಕಂಡಂತಿವೆ. • 2021 ನೇ ಸಾಲಿನಲ್ಲಿ ತುಮಕೂರಿನ ಕುಣಿಗಲ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಒಂದು ಪ್ರಕರಣ ದಾಖಲಾಗಿದ್ದು 06 ಮಕ್ಕಳನ್ನು ಸಂರಕ್ಷಿಸಿ ಒಬ್ಬ ಆರೋಪಿಯನ್ನು ಬಂಧಿಸಲಾಗಿದ್ದು ಪ್ರಕರಣವು ವಿಚಾರಣಾ ಹಂತದಲ್ಲಿರುತ್ತದೆ. ವಿವರವನ್ನು **ಅನುಬಂಧ-1** ರಲ್ಲಿ ನೀಡಿದೆ. • 2021 ನೇ ಸಾಲಿನ ಆಗಸ್ಟ್ ಮಾಹೆಯಲ್ಲಿ ಬೆಂಗಳೂರು ನಗರದಲ್ಲಿ ನಡೆಸಿದ ಕಾರ್ಯಾಚರಣೆಯಲ್ಲಿ ಕೇಂದ್ರ ವಿಭಾಗದಲ್ಲಿ ಒಟ್ಟು 04, ದಕ್ಷಿಣ ವಿಭಾಗದಲ್ಲಿ-03, ಪಶ್ಚಿಮ ವಿಭಾಗದಲ್ಲಿ-06, ಆಗ್ನೇಯ ವಿಭಾಗದಲ್ಲಿ-07, ವೈಟ್‌ಫೀಲ್ಡ್ ವಿಭಾಗದಲ್ಲಿ-02 ಒಟ್ಟು 22 ಮಕ್ಕಳನ್ನು ಭಿಕ್ಷಾಟಣೆ ಮಾಡುತ್ತಿದ್ದ/ಭಿಕ್ಷಾಟಣೆ ತೊಡಗಿಸಿಕೊಂಡಿದ್ದ ಮಕ್ಕಳನ್ನು ಸಂರಕ್ಷಿಸಲಾಗಿದೆ. ಮಕ್ಕಳ ರಕ್ಷಣಾ ನಿರ್ದೇಶನಾಲಯದ ಅಡಿಯಲ್ಲಿ ಅನುಷ್ಠಾನ ಮಾಡಲಾಗುತ್ತಿರುವ ಸಮಗ್ರ ಮಕ್ಕಳ ರಕ್ಷಣಾ ಯೋಜನೆ/ಮಿಷನ್ ವಾತ್ಸಲ್ಯ ಯೋಜನೆಯಡಿಯಲ್ಲಿ ಅನಾಥ, ಪರಿತ್ಯಜಿಸಲ್ಪಟ್ಟ, ಒಪ್ಪಿಸಲ್ಪಟ್ಟ, ದೌರ್ಜನ್ಯಕ್ಕೊಳಗಾದ ಒಟ್ಟಾರೆ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015 ರ ಸೆಕ್ಷನ್ 2(14) ರ ಅಡಿಯಲ್ಲಿ ವ್ಯಾಖ್ಯಾನಿಸಿರುವ ಪಾಲನೆ ಮತ್ತು ರಕ್ಷಣೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಮಕ್ಕಳಿಗೆ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015 ರನ್ವಯ ನೊಂದಾಯಿಸಲ್ಪಟ್ಟ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಮ... ಅಗತ್ಯತೆಗೆ ಅನುಗುಣವಾಗಿ ಪಾಲನೆ ಮತ್ತು ರಕ್ಷಣೆ ಹಾಗೂ ಪುನರ್ವಸ... ಒದಗಿಸಲಾಗುತ್ತಿದೆ.

		6 ವರ್ಷಕ್ಕಿಂತ ಕೆಳಗಿನ ಮಕ್ಕಳನ್ನು ತಾಯಿಯಿಂದ ಬೇರ್ಪಡಿಸಲು ಅವಕಾಶವಿರುವುದಿಲ್ಲ. ಈ ವಯೋಮಾನದ ಮಕ್ಕಳೊಂದಿಗೆ ಭಿಕ್ಷಾಟನೆಯಲ್ಲಿ ತೊಡಗಿರುವ ತಾಯಿಯನ್ನು "ಭಿಕ್ಷಾಟನೆ ನಿಷೇಧ ಕಾಯ್ದೆಯಡಿ" ಬಂಧಿಸಿದ್ದಲ್ಲಿ ಮಗುವನ್ನು ತಾಯಿಯೊಂದಿಗೆ ರಾಜ್ಯ ಮಹಿಳಾ ನಿಲಯಕ್ಕೆ ಕಳುಹಿಸಲಾಗುವುದು. ತಂದೆ-ತಾಯಿ ಒಟ್ಟಿಗಿರುವ 6 ವರ್ಷಕ್ಕಿಂತ ಮೇಲ್ಪಟ್ಟ ಮಕ್ಕಳನ್ನು ಭಿಕ್ಷಾಟನೆಯಿಂದ ರಕ್ಷಿಸಿದ್ದಲ್ಲಿ, ಭಿಕ್ಷಾಟನೆ ಕಾಯ್ದೆಯಡಿ ತಂದೆ-ತಾಯಿ/ಪೋಷಕರನ್ನು ಬಂಧಿಸಿದಲ್ಲಿ ಅಥವಾ 18 ವರ್ಷಕ್ಕಿಂತ ಕಡಿಮೆ ಇರುವ ಯಾವುದೇ ವಯೋಮಾನದ ಮಗುವು ಒಬ್ಬಂಟಿಯಾಗಿ ಭಿಕ್ಷಾಟನೆಯಲ್ಲಿ ತೊಡಗಿದ್ದಲ್ಲಿ, ಸದರಿ ಮಕ್ಕಳ ಪಾಲನೆ ಮತ್ತು ರಕ್ಷಣೆಯನ್ನು ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015 ರಡಿ ನೊಂದಾಯಿತ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಒದಗಿಸಲಾಗುವುದು. ಇದಲ್ಲದೆ ಸಾರ್ವಜನಿಕರು ಬೀದಿ ಬದಿ ಮಕ್ಕಳಿಂದ ವಸ್ತುಗಳನ್ನು ಖರೀದಿಸುವುದು ಅಥವಾ ಮಕ್ಕಳಿಗೆ ಭಿಕ್ಷೆ ನೀಡುವುದರಿಂದ ಆಗುವ ದುಷ್ಪರಿಣಾಮಗಳ ಕುರಿತು ವಿವಿಧ ಸಾಮಾಜಿಕ ಜಾಲತಾಣಗಳಲ್ಲಿ ಅರಿವು ಮೂಡಿಸಲು ಹಲವಾರು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.
ಈ)	ಸಮಾಜ ಕಲ್ಯಾಣ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಜಂಟಿಯಾಗಿ ಇಂತಹ ದಂಧೆಯನ್ನು ತಡೆಯಲು ಯಾವುದಾದರೂ ನಿಯಮವನ್ನು ರೂಪಿಸಲಾಗಿದೆಯೇ;	ಭಿಕ್ಷಾಟನೆಗೆ ಒಳಪಟ್ಟ ಮಕ್ಕಳನ್ನು ಈ ಕೆಳಕಂಡ ವಿಧವಾಗಿ ವಿಂಗಡಿಸಬಹುದು. • ಪೋಷಕರೊಂದಿಗೆ ಭಿಕ್ಷಾಟನೆಯಲ್ಲಿ ತೊಡಗಿರುವುದು:- ಈ ರೀತಿಯ ಸಮಸ್ಯೆಯನ್ನು ಬಗೆಹರಿಸಲು ಸಮಾಜ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿರ್ದೇಶನಾಲಯ, ಪೋಲೀಸ್ ಇಲಾಖೆ, ಮಕ್ಕಳ ರಕ್ಷಣಾ ನಿರ್ದೇಶನಾಲಯ, NLM, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಇತರೆ ಹಲವಾರು ಇಲಾಖೆಗಳು ಜಂಟಿಯಾಗಿ ಕ್ರಮ ವಹಿಸಬೇಕಾಗಿರುತ್ತದೆ. • ಮಾನವ ಸಾಗಾಣಿಕೆಯಿಂದ ಭಿಕ್ಷಾಟನೆಯಲ್ಲಿ ತೊಡಗಿರುವ ಮಕ್ಕಳು:- ಈ ರೀತಿಯ ಮಾನವ ಸಾಗಾಣಿಕೆ ವಿರುದ್ಧ ಪೋಲೀಸ್ ಇಲಾಖೆಯಿಂದ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಕರ್ನಾಟಕ ಭಿಕ್ಷಾಟನಾ ನಿಷೇಧ ಅಧಿನಿಯಮ 1975 ರಾಜ್ಯದಲ್ಲಿ ಜಾರಿಯಲ್ಲಿದೆ. ಸದರಿ ಅಧಿನಿಯಮದನ್ವಯ ಭಿಕ್ಷಾಟನೆಯಲ್ಲಿ ತೊಡಗಿರುವ 16 ವರ್ಷಗಳ ಮೇಲ್ಪಟ್ಟ ಹುಡುಗ ಅಥವಾ 18 ವರ್ಷಗಳ ಮೇಲ್ಪಟ್ಟ ಹುಡುಗಿಯರನ್ನು ಬಂಧಿಸಿ ನಿಯಮಾನುಸಾರ ತಾಲ್ಲೂಕು ದಂಡಾಧಿಕಾರಿಗಳ ಆದೇಶ ಪಡೆದು ಭಿಕ್ಷುಕರ/ನಿರಾಶ್ರಿತರ ಪರಿಹಾರ ಕೇಂದ್ರಗಳ ರಕ್ಷಣೆಯಲ್ಲಿಡಲಾಗುವುದು. ಸದರಿ ಅಧಿನಿಯಮ ಸೆಕ್ಷನ್ 2(4) ರಲ್ಲಿ 16 ವರ್ಷದ ಒಳಗಿರುವ ಹುಡುಗ ಅಥವಾ 18 ವರ್ಷದ ಒಳಗಿರುವ ಹುಡುಗಿಯನ್ನು ಮಗು ಎಂದು ಪರಿಗಣಿಸಲಾಗುವುದರಿಂದ, ಮಕ್ಕಳನ್ನು ಬಂಧಿಸಲು ಕರ್ನಾಟಕ ಭಿಕ್ಷಾಟನಾ ನಿಷೇಧ ಅಧಿನಿಯಮ 1975 ರನ್ವಯ ಅವಕಾಶ ಇರುವುದಿಲ್ಲ. ಈ ರೀತಿ ಭಿಕ್ಷಾಟನೆಯಲ್ಲಿ ತೊಡಗಿರುವ ತಾಯಿಯೊಂದಿಗೆ ಇರುವ ಮಕ್ಕಳನ್ನು ಬಂಧಿಸಿ ನಿಯಮಾನುಸಾರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ವಶಕ್ಕೆ ಕಳುಹಿಸಿಕೊಡಲಾಗುವುದು.

		ಕರ್ನಾಟಕ ಭಿಕ್ಷಾಟನೆ ನಿರ್ಮೂಲನಾ ಕಾಯ್ದೆ 1975 ರಾಜ್ಯದಲ್ಲಿ ಜಾರಿಯಲ್ಲಿರುತ್ತದೆ. ಕೇಂದ್ರ Social Justice and Empowerment ಇಲಾಖೆಯವರು ದೇಶವನ್ನು ಭಿಕ್ಷಾಟನೆ ಮುಕ್ತ ದೇಶವನ್ನಾಗಿ ಮಾಡುವ ಸಲುವಾಗಿ ಮೊದಲನೇ ಹಂತದಲ್ಲಿ ಹತ್ತು ನಗರಗಳನ್ನು ಆಯ್ಕೆ ಮಾಡಿಕೊಂಡಿರುತ್ತಾರೆ. ಇದರಲ್ಲಿ ಬೆಂಗಳೂರು ನಗರ ಸಹ ಸೇರಿರುತ್ತದೆ. ಈ ಯೋಜನೆಯಂತೆ ಒಂದು ನಗರವನ್ನು ಭಿಕ್ಷಾಟನೆ ಮುಕ್ತ ನಗರವನ್ನಾಗಿ ಮಾಡುವ ಸಲುವಾಗಿ ಹೊರಡಿಸಿದ ಮಾರ್ಗಸೂಚಿಗಳನ್ನು **ಅನುಬಂಧ-2** ರಲ್ಲಿ ನೀಡಿದೆ.
ಉ)	ಕಾಣೆಯಾಗಿರುವ ಮಕ್ಕಳನ್ನು ಈ ದಂಧೆಗೆ ಉಪಯೋಗಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಬಂದಿದೆ. ಒಳಾಡಳಿತ ಇಲಾಖೆಯಿಂದ ಕಾಣೆಯಾಗಿರುವ ಮಕ್ಕಳನ್ನು ಭಿಕ್ಷಾಟನೆಯ ದಂದೆಗೆ ಬಳಸಿಕೊಳ್ಳುವುದು ತಡೆಗಟ್ಟುವ ನಿಟ್ಟಿನಲ್ಲಿ ಮಾನ್ಯ ಲೋಕಾಯುಕ್ತ ಸಂಸ್ಥೆಯಿಂದ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ಕಾಣೆಯಾದ ಮಕ್ಕಳ ಪ್ರಕರಣಗಳ ತನಿಖೆಯನ್ನು ಗಂಭೀರವಾಗಿ ಪರಿಗಣಿಸುವಂತೆ ಆಗಾಗ್ಗ ಮಾನ್ಯ ಲೋಕಾಯುಕ್ತ ರವರ ಕಾರ್ಯಾಲಯದಲ್ಲಿ ವಿಚಾರಣೆಯನ್ನು ಕೈಗೊಳ್ಳಲಾಗುತ್ತಿದ್ದು, ಈ ಬಗ್ಗೆ ಮಕ್ಕಳ ಕಾಣೆ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ ತನಿಖೆಯನ್ನು ಕೈಗೊಂಡು ಕಾಣೆಯಾದ ಮಕ್ಕಳಿಗೆ ಸೂಕ್ತ ಕಾನೂನು ರಕ್ಷಣೆ ನೀಡಲಾಗುತ್ತಿದೆ. ಒಳಾಡಳಿತ ಇಲಾಖೆಯಿಂದ ರಾಜ್ಯದಲ್ಲಿ ಒಟ್ಟಾರೆ 30 ಮಾನವ ಕಳ್ಳ ಸಾಗಾಣಿಕೆ ನಿಷೇಧ ಘಟಕಗಳನ್ನು ಸ್ಥಾಪಿಸಿದ್ದು ಕಾಣೆ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸುವಂತೆ ಎಲ್ಲಾ ಘಟಕಾಧಿಕಾರಿಗಳಿಗೆ ನಿರ್ದಿಷ್ಟ ಕಾರ್ಯವಿಧಾನ ಮತ್ತು ಸ್ಥಾಯಿ ಆದೇಶವನ್ನು ಹೊರಡಿಸಿದ್ದು ಅದರಂತೆ ಅಗತ್ಯ ಕ್ರಮಗೈಗೊಳ್ಳುವ ಬಗ್ಗೆ ಸೂಕ್ತ ನಿರ್ದೇಶನ ನೀಡಲಾಗಿರುತ್ತದೆ.

ಸಕಇ 31 ಎಸ್‌ಬಿಆರ್ 2021

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಅನುಬಂಧ-1

ಭಿಕ್ಷಾಟನೆಗೆ ಹೆಚ್ಚಾಗಿ ಚಿಕ್ಕಮಕ್ಕಳನ್ನು ಮಾನವ ಕಳ್ಳಸಾಗಾಣಿಕೆ ಮಾಡಿ, ಈ ಭಿಕ್ಷಾಟನೆಗೆ ಉಪಯೋಗಿಸಿಕೊಳ್ಳುತ್ತಿರುವ
ಕುರಿತು ಮಾಹಿತಿ ಒದಗಿಸುವ ಬಗ್ಗೆ.

ಕ್ರ. ಸಂ	ಪೊಲೀಸ್ ಠಾಣೆ ಹೆಸರು	ಮೊ.ನಂ. ಮತ್ತು ಕಲಂ	ಫಿರ್ಯಾದುದಾರರ ಹೆಸರು	ಭಿಕ್ಷಾಟನೆಗೊಳಪಟ್ಟ ಮಕ್ಕಳ ವಿವರ	ದಸ್ತಗಿರಿಯಾದ ಆರೋಪಿಗಳ ವಿವರ	ಪ್ರಕರಣದ ಪ್ರಸ್ತುತ ಹಂತ
1	ಕುಣಿಗಲ್	115/2021 ಕಲಂ-76, 77 ಜೆಜೆ ಆಕ್ಟ್ ರೆ/ವಿ 363(ಎ), 506 ಐಪಿಸಿ.	ವಾಸಂತಿ ಉಪ್ಪಾರ್ ಕೋಂ ನಾಗೇಶ್ ಕುಮಾರ್.ಟಿ, 53 ವರ್ಷ, ಉಪ್ಪಾರರು, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ತುಮಕೂರು ಜಿಲ್ಲೆ ತುಮಕೂರು.	1)ಶಶಿ ಬಿನ್ ಲೇಟ್ ವೆಂಕಟೇಶ, 14 ವರ್ಷ, ಕೌಡ್ಲೆಕೊಪ್ಪ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ. 2) ರತ್ನ ಬಿನ್ ಗಂಗಯ್ಯ, 9 ವರ್ಷ, ಚಂದಗಲ್ ಗ್ರಾಮ, ಕೊಪ್ಪ ಹತ್ತಿರ, ಮದ್ದೂರು ತಾ, ಮಂಡ್ಯ ಜಿಲ್ಲೆ. 3) ಅಮ್ಮು ಕೋಂ ಚಂದ್ರು, 11 ವರ್ಷ, ತಾವರೇಕೆರೆ, ಬೆಂಗಳೂರು. 4) ಕಾವೇರಿ ಬಿನ್ ಚಂದ್ರು, 8 ವರ್ಷ, ತಾವರೇಕೆರೆ, ಬೆಂಗಳೂರು. 5) ಪಂಕಜ್ ಬಿನ್ ಲೇಟ್ ವೆಂಕಟೇಶ, 8 ವರ್ಷ, ಕೌಡ್ಲೆಕೊಪ್ಪ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ. 6) ಸುಬ್ರಹ್ಮಣ್ಯ ಬಿನ್ ಚಂದ್ರು, 6 ವರ್ಷ, ತಾವರೇಕೆರೆ, ಬೆಂಗಳೂರು.	ರಾಜ್ ಗೋಪಾಲ್ @ ರಾಜು @ ರಾಜಣ್ಣ @ ತೊರೆ ಬಿನ್ ಲೇಟ್ ಹುಚ್ಚಪ್ಪ, 16 ವರ್ಷ, ನಾಯಕ ಜನಾಂಗ, ಚಿಂದಿ ಹಾಯುವ ಕೆಲಸ, ಹೊಸಹಳ್ಳಿ, ಓಬಳಾಪುರ ಪೋಸ್ಟ್, ತುಮಕೂರು ತಾಲ್ಲೂಕು.	ತುಮಕೂರು ಫ ಬಾಲ ನ್ಯಾಯ ಮಂಡಳಿಯಲ್ಲಿ ಜೆ.ಸಿ ನಂ 54/2021 ರ ವಿಚಾರಣೆ ಯಲ್ಲಿರುತ್ತೆ.

ಅನುಬಂಧ - 2

HOLISTIC APPROACH

(Family based Rehabilitation and not treating child as a separate and lonely entity)

The above detailed Child-centric rehabilitation is though an immediate requirement this alone will not solve the problem. Child begging and child hawking will be ended only when their families are rehabilitated. It is observed that presently all the slum areas are like the islands in the mainstream society amidst which they are present without getting benefits of any of the Government services and schemes. Although many of these slum areas people have come from other States to Bengaluru couple of decades back and settled in these slums they have not merged with the local society and strictly maintained their original language and culture. This being the case they are not willing to go to far off Government Health facilities, Anganwadis etc. Hence Government services should only go to the place where they are staying.

It is observed that these families are lacking in family planning. Also polygamy and polyandry and extra-marital relations of either of the parents in some cases is leading to the negligence of children by parents. Poverty is an additional factor for neglecting the children. All these problems should be solved and a healthy family atmosphere should be provided to the children as Institutional care is the last resort contemplated by the Juvenile Justice Act,2015.

Accordingly a detailed Slum survey should be conducted and a data base should be maintained with all the details of these families. Each family should be given Ration Card etc. All of them should be given Aadhaar and all the eligible adults should be given Voter Ids etc.

Anganwadi must be opened at every slum locality and every 0 to 6 years slum child must get all the services of the Anganwadi.

One Primary Health Centre, PHC can be opened at every slum locality or at least there must be minimum one weekly Health Camp be conducted in every slum locality and it must be ensured that all these families adopt family planning and minimum hygiene.

It is essential to handhold these families till they get accustomed to alternative livelihood and completely come out of begging. This is very important because presently many of these families are dependent on begging for their livelihood either in the guise of hawking or coupled with hawking. This can be achieved by forming and sustaining the Self-Help Groups, SHGs of both men and women on a larger scale and with a mission mode dedication and focus coupled with sustained and patient efforts by the concerned Government Departments. Through these SHGs both men and women can be given skill development and engaged in productive economic activities and Government must ensure sustainable marketing for their products till they get self-sustainability.

Also these families must be given quality free-counselling services on a regular and sustainable basis by NIMHANS or GoK so that their social relationships are healthy and thus ensure happy family environment for the children.

Also Government must ensure supplementary curricular and extra-curricular activities support to these children in the evening hours even if they are attending the formal schools because post-school hours these children will not get the parental curricular and extra-curricular support that the mainstream families provide to their children. This is also one of the important reasons why many children are found in the evening hours either begging or hawking at the traffic junctions or Malls in the evening hours. Through Public Private Partnership, PPP model Government should encourage NGOs to give this supplementary curricular and extra-curricular support to these children that the mainstream children get from their parents.

Sd/-
(Pallavi Akurathi I.A.S.,)
Director,
Directorate of Child Protection,
Government of Karnataka.